61402

# ನಾಲ್ಕನೇ ಸೆಮಿಸ್ಟರ್ ಬಿ.ಎಸ್ಸಿ. ಪದವಿ ಪರೀಕ್ಷೆ, ಸೆಪ್ಟೆಂಬರ್ / ಅಕ್ಟೋಬರ್ 2022
## (CBCS) (F+R) (2019 – 20 Onwards)
## ಕನ್ನಡ ಭಾಷೆ – IV
## ಸುವರ್ಣ ಸಂಪದ

Time : 3 Hours Max. Marks : 70

I. ಅ) ಈ ಕೆಳಗಿನ ಪದ್ಯದ ಭಾವಾರ್ಥವನ್ನು ಬರೆಯಿರಿ. **(1×6=6)**

ಕಾಮವೆತ್ತಲು ಪರಮ ತತ್ವದ
ಸೀಮೆಯೆತ್ತಲು ತಿಮಿರವೆತ್ತಲು
ತಾಮರಸ ಸಖನೆತ್ತ ಮೇಣಱಿವೆತ್ತ ಮಱವೆತ್ತ
ಭ್ರಾಮಕದ ನುಡಿಸಾಕು ನೀನೆ
ತ್ತಾ ಮಹಾಘನವೆತ್ತ ಮರುಳೇ
ಕ್ಷೇಮದಲಿ ನೀ ಬಂದ ಬಟ್ಟೆಯಲಬಳೆ ಹೋಗೆಂದ ॥

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×2=4)**

1) ಸಾಹಸಭೀಮ ವಿಜಯ
2) ಚಾಮರಸ
3) ಅಲ್ಲಮಪ್ರಭು
4) ಕೀರ್ತನ ಸಾಹಿತ್ಯ.

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. **(1×10=10)**

1) ಅಲ್ಲಮ ಮಾಯೆಯನ್ನು ತಿರಸ್ಕರಿಸುವ ಸನ್ನಿವೇಶವನ್ನು ಕುರಿತು ಬರೆಯಿರಿ.
2) ಲೌಕಿಕ ವೃತ್ತಿಗಳನ್ನು ಕೀರ್ತನೆಯಲ್ಲಿ ಆಧ್ಯಾತ್ಮಿಕವಾಗಿ ಹೇಗೆ ವಿಸ್ತರಿಸಿದ್ದಾರೆ ? ವಿವರಿಸಿ.

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(2×5=10)**

1) ವಿಶ್ವಮಾನ್ಯ ಮೆಂಡಲಿಯನ್ ಸಿದ್ಧಾಂತ.
2) ಪ್ರಾಚೀನ ಸಂಸ್ಕೃತಿಯಲ್ಲಿ ಹೆಣ್ಣಿನ ಸ್ಥಾನಮಾನ.
3) ಗಾಂಧೀಜಿಯವರು ಮಹಿಳೆಯನ್ನು ಗ್ರಹಿಸಿರುವ ಬಗೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಗಜಮುಖನ ಕ್ಷೀರದಾಹದ ಪವಾಡವನ್ನು, ಅದಕ್ಕೆ ನೀಡಿದ ವೈಜ್ಞಾನಿಕ ವಿವರಣೆಯನ್ನು ವಿವರಿಸಿ.

2) ಮಹಿಳೆಗೆ ಯಶಸ್ಸಿನ ಹಾದಿಯಲ್ಲಿ ಎದುರಾಗುವ ಕಂಟಕಗಳು ಹಾಗೂ ಸವಾಲುಗಳನ್ನು ವಿವರಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಮರುಭೂಮಿಯ ದೈತ್ಯ ಚಿತ್ರಗಳನ್ನು ಕುರಿತು ಬರೆಯಿರಿ.

2) ಕುಸ್ಕೊ ನೆಲದ ದಂತಕಥೆಯನ್ನು ತಿಳಿಸಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಇನ್ಕಾ ದೊರೆಗಳು ಆಚರಿಸುವ ಸೂರ್ಯ ಹಾಗೂ ವೀರಕೋಚ ದೇವರ ಆರಾಧನೆ ಹಾಗೂ ಹಬ್ಬವನ್ನು ಕುರಿತು ಬರೆಯಿರಿ.

2) ಭಾರತೀಯರಿಗೂ ಇನ್ಕಾಗಳಿಗೂ ಇರುವ ಪ್ರಕೃತಿ ಪೂಜೆಯಲ್ಲಿನ ಸಾಮ್ಯತೆಯನ್ನು ತಿಳಿಸಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. (1×5=5)

1) ಇತರರ ತಪ್ಪುಗಳನ್ನೇ ಎತ್ತಿ ತೋರಿಸುವ ಮನುಷ್ಯನ ಗುಣದ ವಿಡಂಬನೆ ಲೇಖನದಲ್ಲಿ ಹೇಗೆ ಮೂಡಿದೆ ? ವಿವರಿಸಿ.

2) ಧಾರ್ಮಿಕ ಆಚರಣೆಗಳನ್ನು ಕುರಿತ ವಚನಕಾರರ ಧೋರಣೆಗಳನ್ನು ಕುರಿತು ಬರೆಯಿರಿ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ. (1×10=10)

1) ಮಾನವೀಯತೆಯ ಬದಲಿಗೆ ಅಮಾನವೀಯತೆ ಮಾನವನಲ್ಲಿ ನೆಲೆಸಿರುವುದರ ಬಗ್ಗೆ ಲೇಖಕರು ಹೇಗೆ ವಿವರಿಸಿದ್ದಾರೆ ? ತಿಳಿಸಿ.

2) ನವೋದಯವನ್ನು ಕುರಿತ ಅಕಾಡೆಮಿಕ್ ವಲಯದ ಚರ್ಚೆಯ ಗಡಿರೇಖೆಗಳನ್ನು ಲೇಖಕರು ಹೇಗೆ ವ್ಯಾಖ್ಯಾನಿಸಿದ್ದಾರೆ ? ವಿವರಿಸಿ.

---